
# ಜ್ಞಾನಶಕ್ತಿ
ಮಾಸ ಪತ್ರಿಕೆ

JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 13 Reg. No. : KARBIL / 2005 / 16123 ಮಾರ್ಚ್ - 2024 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 3 ಪ್ರಕಟಣೆ : 25-03-2024


## ಸನಾತನ ಧರ್ಮದ ಮೂಲ ವೇದಗಳು – ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು



*'ಸನಾತನ ಧರ್ಮದಲ್ಲಿ ವೇದಗಳು ಉನ್ನತ ಸ್ಥಾನವನ್ನು ಹೊಂದಿದ್ದು, ಶ್ರೀ ಶಂಕರ ಭಗವತ್ಪಾದರ ಭಾಷ್ಯದಲ್ಲಿ ಹೇಳಿದಂತೆ ವೇದಗಳು ವಿಧಿಸಿದ ಕರ್ಮಗಳನ್ನು ನಿತ್ಯ ಅನುಷ್ಠಾನ ಮೂಲಕ ಭಕ್ತರು ಪಾಲಿಸಬೇಕು'* ಎಂದು ಗುರುಗಳು ಆದೇಶ ನೀಡಿದರು. ತಾರೀಕು **17-02-2024**ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸ್ಥಾನಿಕ ಬ್ರಾಹ್ಮಣ ಶಿಷ್ಯ ಸಮಾಜವನ್ನು ಅವರು ಅನುಗ್ರಹಿಸಿದರು.

ಶೃಂಗೇರಿಯಿಂದ ಆಗಮಿಸಿದ ಗುರುಗಳನ್ನು ಪೂರ್ಣಕುಂಭ ಮೂಲಕ ಸ್ವಾಗತಿಸಲಾಯಿತು. ಶ್ರೀ ನವಚಂಡಿ ಹವನದ ಪೂರ್ಣಾಹುತಿಯನ್ನು ಶ್ರೀ ಗುರುಗಳ ಸಾನಿಧ್ಯದಲ್ಲಿ ನೆರವೇರಿಸಲಾಯಿತು. ವೇದಘೋಷದೊಂದಿಗೆ ಶ್ರೀ ಸಭಾಕ್ಕೆ ಪ್ರಥಮ ಬಾರಿ ಆಗಮಿಸಿದ ಗುರುಗಳ ಪಾದಸ್ಪರ್ಶದ ಶಾಶ್ವತ ಸ್ಮರಣಫಲಕವನ್ನು ಶ್ರೀ ಗುರುಗಳು ಅನಾವರಣಗೊಳಿಸಿದರು.

ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಮತ್ತು ಶ್ರೀಮತಿ ಕನಕವಲ್ಲೀ ದಂಪತಿಗಳು ಧೂಳೀ ಪಾದಪೂಜೆ ನಡೆಸಿದರು. ಶ್ರೀ ಸುಬ್ರಹ್ಮಣ್ಯ ಸಭಾ ಹಾಗೂ ವಿವಿಧ ಸಂಘ-ಸಂಸ್ಥೆಗಳಿಂದ ಫಲಕಾಣಿಕೆ ಸಮರ್ಪಿಸಲಾಯಿತು. ಅಧ್ಯಕ್ಷರ ಸ್ವಾಗತ ಭಾಷಣ ಬಳಿಕ ಶ್ರೀ ಗುರುಗಳ ದಿವ್ಯಹಸ್ತದಿಂದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿ ವೇದಪೋಷಕ ನಿಧಿಯನ್ನು ಹಸ್ತಾಂತರಿಸಲಾಯಿತು.

ಶ್ರೀ ಗುರುಗಳ ಆಶೀರ್ವಚನ ಆದ ಬಳಿಕ ನೆರೆದ ಭಕ್ತರಿಗೆ ಗುರುಗಳು ಅಮೃತಹಸ್ತದಿಂದ ಫಲ-ಮಂತ್ರಾಕ್ಷತೆ ನೀಡಿದರು. ಶ್ರೀ ಸಭಾ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಕಾರ್ಯಕ್ರಮ ಸಂಘಟಿಸಿದರೆ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ನಿರೂಪಿಸಿದರು. ಶ್ರೀ ರಘುವೀರ್ ಪೆರ್ಡೂರ್ ಫೋಟೋ, ವೀಡಿಯೋ ಒದಗಿಸಿ ಸಹಕರಿಸಿದರು. ಶ್ರೀ ಸಭಾ ಉಪಾಧ್ಯಕ್ಷರುಗಳಾದ ಡಾ। ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಜೊತೆ ಕಾರ್ಯದರ್ಶಿಗಳಾದ ಶ್ರೀ ಅನಿಲ್ ರಾವ್ ಬಿ. ಎಸ್, ಶ್ರೀ ಚೇತನ್ ಶರ್ಮ, ಯುವವೇದಿಕೆ ಅಧ್ಯಕ್ಷ ಶ್ರೀ ಅನಿಲ್ ನೆಲ್ಲಿಕುಂಜೆ, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ವ್ಯವಸ್ಥೆಗಳಲ್ಲಿ ಸಹಕರಿಸಿದರು.

(ಛಾಯಾಚಿತ್ರ : ಶ್ರೀ ರಘುವೀರ್ ಪೆರ್ಡೂರ್)








## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)
ಬಿಜೈ ರಸ್ತೆ, ಮಂಗಳೂರು





ಸಮಾಜ ಬಾಂಧವರೇ,

ದಿನಾಂಕ **07-04-2024**ನೇ ರವಿವಾರ

**ಶ್ರೀ ಸಭಾದ ವತಿಯಿಂದ**

ಶ್ರೀ ಶ್ರೀ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ

**ವರ್ಧಂತ್ಯುತ್ಸವ ಹಾಗೂ ಶ್ರೀ ರಾಮನವಮಿ ಕಾರ್ಯಕ್ರಮಗಳನ್ನು**

ಶ್ರೀ ಸುಬ್ರಹ್ಮಣ್ಯ ಸಭಾಸದನದಲ್ಲಿ ಆಚರಿಸಲಾಗುವುದು.

ಆ ಪ್ರಯುಕ್ತ ಶ್ರೀರಾಮ ದೇವರಿಗೆ ಕಲಶಾಭಿಷೇಕ ಹಾಗೂ ಕಲ್ಪೋಕ್ತ ಪೂಜೆ ನಡೆಯಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಅಧ್ಯಕ್ಷರು ಹಾಗೂ ಸರ್ವ ಸದಸ್ಯರು

**ಕಾರ್ಯಕ್ರಮಗಳು**

| | |
|---|---|
| ಬೆಳಗ್ಗೆ ಗಂಟೆ 8-30 : | ಉಪಾಹಾರ |
| ಬೆಳಗ್ಗೆ ಗಂಟೆ 9-00 : | ಶ್ರೀ ಶಾರದಾಂಬ ಭಜನಾ ಮಂಡಳಿ ಇವರಿಂದ 'ಭಜನಾ ಕಾರ್ಯಕ್ರಮ' |
| ಬೆಳಗ್ಗೆ ಗಂಟೆ 10-30 : | ಶ್ರೀ ರಾಮದೇವರಿಗೆ ಕಲಶಾಭಿಷೇಕ ಮತ್ತು ಕಲ್ಪೋಕ್ತ ಪೂಜೆ<br>ಶ್ರೀಗುರುಗಳ ಕುರಿತು ಪ್ರವಚನ<br>ಶ್ರೀ ಸಂಜಯ್ ಕುಮಾರ್ ಫಲಿಮಾರು ಇವರಿಂದ |
| ಮಧ್ಯಾಹ್ನ ಗಂಟೆ 12-30 : | ಪ್ರಸಾದ ಭೋಜನ |

## ಶ್ರೀ ಸುಬ್ರಹ್ಮಣ್ಯ ಸಭಾ ಚಾರಿಟೇಬಲ್ ಟ್ರಸ್ಟ್
ಶಿವಸದನ, ಮುರ, ಪುತ್ತೂರು, ದ. ಕ.

**ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿನಿಲಯ**

**ನೂತನ ಮೂರನೇ ಅಂತಸ್ತಿನ ಉದ್ಘಾಟನೆ**

ದಿನಾಂಕ : 29-03-2024ನೇ ಶುಕ್ರವಾರ ಬೆಳಗ್ಗೆ ಗಂಟೆ 11-00ಕ್ಕೆ

ಉದ್ಘಾಟಕರು : ಶ್ರೀ ನಿಶಾಂತ್ ರಾವ್, ನಿರ್ದೇಶಕರು, IQVIA

ಅಭ್ಯಾಗತರು :

ಶ್ರೀ ಸ್ವಾಮಿ ರುದ್ರ, ಹಿರಿಯ ವ್ಯವಸ್ಥಾಪಕರು, IQVIA

ಶ್ರೀ ಕೆ. ಪ್ರಭಾಕರ್ ರಾವ್, ನಿರ್ದೇಶಕರು, ಶ್ರೀ ಮಾಧವ ಸೇವಾ, ಬೆಂಗಳೂರು

ಶ್ರೀ ಚಂದ್ರಕಾಂತ ರಾವ್ ಇನ್ನ, ನಿರ್ವಹಣಾ ಸಲಹೆಗಾರ, ಮಾಜಿ ಅಧ್ಯಕ್ಷರು ಸ್ವಿಸ್ ಸಿಂಗಾಪುರ್ ಸಾಗರೋತ್ತರ ಉದ್ಯಮ, ಸಿಂಗಾಪುರ ಆದಿತ್ಯ ಬಿರ್ಲಾ ಪರಿವಾರ

ಆದರದ ಸ್ವಾಗತ ಬಯಸುವ

ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಸದಸ್ಯರು
ಶ್ರೀ ಸುಬ್ರಹ್ಮಣ್ಯ ಸಭಾ ಚಾರಿಟೇಬಲ್ ಟ್ರಸ್ಟ್, ಮಂಗಳೂರು

**ಕಾರ್ಯಕ್ರಮಗಳು**

| | |
|---|---|
| ಬೆಳಗ್ಗೆ ಗಂಟೆ 8-30ಕ್ಕೆ : | ಉಪಾಹಾರ |
| ಬೆಳಗ್ಗೆ ಗಂಟೆ 9-00ರಿಂದ : | ಶ್ರೀ ಸತ್ಯನಾರಾಯಣ ಪೂಜೆ ಪ್ರಾರಂಭ |
| ಬೆಳಗ್ಗೆ ಗಂಟೆ 10-00ರಿಂದ : | ಭಜನಾ ಕಾರ್ಯಕ್ರಮ |
| ಬೆಳಗ್ಗೆ ಗಂಟೆ 11-00ರಿಂದ : | ಉದ್ಘಾಟನಾ ಕಾರ್ಯಕ್ರಮ |
| ಮಧ್ಯಾಹ್ನ ಗಂಟೆ 12-30ಕ್ಕೆ : | ಮಂಗಳಾರತಿ ಮತ್ತು ಪ್ರಸಾದ ಭೋಜನ |

## ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು :

ಎಂ. ಎಸ್. ರಘುನಾಥ ರಾವ್ ಪುತ್ತೂರು - 9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ • ರಘುವೀರ್ ಪೆರ್ಡೂರು
• ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ : • ಕರುಣ್ ರಾವ್ ಬೆಳ್ಳೆ •ಅನಿಲ್ ರಾವ್ ಬಿ.ಎಸ್.

ಗೌರವ ಸಲಹೆಗಾರರು : •ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಹರ್ಷಕುಮಾರ್ ಕೇದಿಗೆ

: 7795116598 ✆ : 9343361618 e-mail : jnanashakthisss@gmail.com


## ವಿದುಷಿ ಪ್ರೀತಿಕಾ ಎ. ರಾವ್ ಇವರಿಗೆ 'POWER WOMEN' ಅವಾರ್ಡ್



ತಾ. 3-3-2024ನೇ ಆದಿತ್ಯವಾರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಬೆಂಗಳೂರು 'ರವೀಂದ್ರ ಕಲಾಕ್ಷೇತ್ರ'ದಲ್ಲಿ ಜರಗಿದ ಸಮಾರಂಭದಲ್ಲಿ **'ಕರ್ನಾಟಕ ಬುಕ್ ಆಫ್ ರೆಕಾರ್ಡ್' ಸಂಸ್ಥೆಯವರು** ವಿದುಷಿ ಪ್ರೀತಿಕಾ ಎ. ರಾವ್ ಇವರಿಗೆ 'POWER WOMEN' ಅವಾರ್ಡ್‌ನ್ನು ನೀಡಿ ಗೌರವಿಸಿರುತ್ತಾರೆ.

ಇವರು ಬೆಂಗಳೂರಿನ ರಾಮಮೂರ್ತಿ ನಗರದಲ್ಲಿ 'ಈಶ್ವರಿ ನೃತ್ಯಾಲಯ' ನಡೆಸುತ್ತಾ ಹಲವಾರು ಮಕ್ಕಳಿಗೆ ಭರತನಾಟ್ಯವನ್ನು ಕಲಿಸಿರುತ್ತಾರೆ.

ಇವರು ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ ಹಾಗೂ ಶ್ರೀಮತಿ ಕನಕವಲ್ಲಿ ಹರ್ಷಕುಮಾರ್ ಇವರ ಸುಪುತ್ರಿ ಹಾಗೂ ಅಲೆವೂರು ಕೃಷ್ಣ ರಾವ್ ಹಾಗೂ ಶ್ರೀಮತಿ ಹೇಮ ರಾವ್ ಇವರ ಸೊಸೆ ಹಾಗೂ ಅಲೆವೂರು ಶ್ರೀ ಅಭಿಷೇಕ್ ರಾವ್ ಇವರ ಧರ್ಮಪತ್ನಿ.


## ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

ಅಂಚೆ : ಕೋಡಿಂಬಾಡಿ - 574 325, ಪುತ್ತೂರು, ದ. ಕ.

ಆತ್ಮೀಯ ಭಗವದ್ಭಕ್ತರೇ,

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ, ದಕ್ಷಿಣಾಮ್ನಾಯ
ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ
ಮಹಾಸನ್ನಿಧಾನಂಗಳವರ ಹಾಗೂ ತತ್ಕರಕಮಲ ಸಂಜಾತರಾದ ಜಗದ್ಗುರು
ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಕೃಪಾಶೀರ್ವಾದ

ಸ್ವಸ್ತಿ! ಶ್ರೀ ಶೋಭಕೃತ್ ಸಂವತ್ಸರದ ಫಾಲ್ಗುಣ ಪೌರ್ಣಮಿ ತಿಥಿ
ದಿನಾಂಕ **25-03-2024**ನೇ ಸೋಮವಾರ
ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಿಯ

**ಪ್ರತಿಷ್ಠಾ ಮಹೋತ್ಸವ ಮತ್ತು ಜಾತ್ರೋತ್ಸವ**

ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿ
ಇವರ ನೇತೃತ್ವದಲ್ಲಿ ಜರಗಲಿದೆ.

ಈ ದೇವತಾ ಕಾರ್ಯಕ್ರಮಗಳಿಗೆ ಭಕ್ತಾಭಿಮಾನಿಗಳಾದ ತಾವೆಲ್ಲರೂ ಆಗಮಿಸಿ, ತನು-ಮನ-ಧನಗಳೊಂದಿಗೆ ಸಹಕರಿಸಿ, ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ-

| | | |
|---|---|---|
| ಯಂ. ನಾಗೇಶ ಶರ್ಮ | ಕೆ. ಕೃಷ್ಣ ರಾವ್ ಬೆಂಗಳೂರು | ಟಿ. ಅಣ್ಣಪ್ಪಯ್ಯ ತೆಂಕಿಲ |
| ಅರ್ಚಕರು ಹಾಗೂ ಕಾರ್ಯದರ್ಶಿ | ಅಧ್ಯಕ್ಷರು ಮತ್ತು ಸದಸ್ಯರು ಜೀರ್ಣೋದ್ಧಾರ ಸಮಿತಿ | ಅಧ್ಯಕ್ಷರು ಮತ್ತು ಸದಸ್ಯರು ಆಡಳಿತ ಸಮಿತಿ |



## ಶ್ರೀ ಜಯದುರ್ಗಾಪರಮೇಶ್ವರೀ ದೇವಸ್ಥಾನ, ಕಡಬ

ಭಕ್ತಮಹಾಜನರೇ,

ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯವರ್ಯೇತ್ಯಾದಿ
ಅನೇಕಬಿರುದುಭೂಷಿತರಾದ ದಕ್ಷಿಣಾಮ್ನಾಯ
ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರಾದ ಶ್ರೀಮಜ್ಜಗದ್ಗುರು
ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಪರಮಾನುಗ್ರಹ
ಪುರಸ್ಸರ ಆಶೀರ್ವಾದಗಳಿಂದ, ತತ್ಕರಕಮಲ ಸಂಜಾತರಾದ ಶ್ರೀಮಜ್ಜಗದ್ಗುರು
ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ನಮ್ಮ ಶ್ರದ್ಧಾಭಕ್ತಿಪುರಸ್ಸರವಾದ
ಪ್ರಾರ್ಥನೆಯನ್ನು ಅಂಗೀಕರಿಸಿ ನಮ್ಮ ಊರಿಗೆ ದಯಮಾಡಿಸಿ
ಅವರ ದಿವ್ಯ ಅಮೃತಹಸ್ತದಿಂದ

ಸ್ವಸ್ತಿ! ಶ್ರೀ ಶಾಲಿವಾಹನ ಶಕವರ್ಷ ೧೯೪೬ನೇ ಕ್ರೋಧಿನಾಮ ಸಂವತ್ಸರದ
ಚೈತ್ರಕೃಷ್ಣ ತೃತೀಯ ದಿನಾಂಕ **26-04-2024**ನೇ ಶುಕ್ರವಾರದಂದು
ಪ್ರಾತಃಕಾಲ **9-24**ರ ಶುಭ ಮಿಥುನ ಲಗ್ನದಲ್ಲಿ
ಶ್ರೀ ಜಯದುರ್ಗಾಪರಮೇಶ್ವರೀ ದೇವರ

**ಪ್ರತಿಷ್ಠಾ ಬ್ರಹ್ಮಕುಂಭಾಭಿಷೇಕ ಮಹೋತ್ಸವ**

ನೆರವೇರಿಸಿ ಶಿಷ್ಯಜನರನ್ನು ಆಶೀರ್ವದಿಸಲಿದ್ದಾರೆ.
ಶ್ರೀ ಗುರುದೇವತಾನುಗ್ರಹದಿಂದ ಶ್ರೀ ಶೃಂಗೇರಿ ಮಠದ ಉಡುಪಿ
ಪ್ರಾಂತ್ಯದ ಧರ್ಮಾಧಿಕಾರಿಗಳು ಹಾಗೂ
ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿ
ಇವರ ನೇತೃತ್ವದಲ್ಲಿ ನೆರವೇರಲಿರುವ ಈ ದೇವತಾ ಕಾರ್ಯಕ್ರಮಗಳಲ್ಲಿ
ತಾವೆಲ್ಲರೂ ಭಾಗವಹಿಸಿ, ತನು-ಮನ-ಧನಗಳಿಂದ ಸಹಕರಿಸಿ,
ಶ್ರೀ ಜಯದುರ್ಗಾಪರಮೇಶ್ವರೀ ದೇವಿಯ ಹಾಗೂ ಶ್ರೀ ಜಗದ್ಗುರುಗಳ
ಅಪಾರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

| | | |
|---|---|---|
| ಶ್ರೀ ಜಯದುರ್ಗಾ ಭಜನಾ ಮಂಡಳಿ, ಕಡಬ | ಶ್ರೀ ಜಗದ್ಗುರು ಅಭಿವಂದನಾ ಸಮಿತಿ | ಬ್ರಹ್ಮಕಲಶೋತ್ಸವ ಸಮಿತಿ |
| ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಸದಸ್ಯರು | ಗೌರವಾಧ್ಯಕ್ಷರು, ಅಧ್ಯಕ್ಷರು ಕಾರ್ಯದರ್ಶಿ ಮತ್ತು ಸದಸ್ಯರು | ಗೌರವಾಧ್ಯಕ್ಷರು, ಅಧ್ಯಕ್ಷರು ಕಾರ್ಯದರ್ಶಿಗಳು ಮತ್ತು ಸದಸ್ಯರು |



ಪತ್ರಿಕೆಗೆ ಶುಭ ಬಯಸುವ-

ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ



ಪತ್ರಿಕೆಗೆ ಶುಭ ಬಯಸುವ-

**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216



Muralidhara Rao Adyapadi
Proprietor
Mob : 94480 27259
99803 16434




**SPANDANA**
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO



NAVADURGA FINANCIALS
Estd 1998
SCAN ME TO KNOW MORE!!!

# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಮಂಗಳೂರಿನ ದುಬೈ ನಿವಾಸಿ ಶ್ರೀ **ಮೈಕಲ್ ಡಿ'ಸೋಜಾ** ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿ ನಿಲಯಕ್ಕೆ ರೂ. 5,00,000/– (ರೂಪ್ಯಾ ಐದು ಲಕ್ಷ) ದೇಣಿಗೆ ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಶ್ರೀ ಸಭಾದ ನಿರ್ದೇಶಕ ಶ್ರೀ ಇನ್ನ ಚಂದ್ರಕಾಂತ್ ರಾವ್ ಇವರ ಪ್ರಯತ್ನದಿಂದ ಇದು ಸಾಧ್ಯವಾಗಿದೆ. ಅವರಿಗೂ ವಂದನೆಗಳು.



ಮಂಗಳೂರು ನಿವಾಸಿ ದಿ। ಅನಿಲ್ ಬನ್ಸಾಲ್ ಸ್ಮರಣಾರ್ಥ ಅವರ ಪುತ್ರ ಅಂಕಿತ್ ಬನ್ಸಾಲ್ (Bright Packaging Pvt. Ltd.) ಸೊಸೆ ಖುಷ್ಬು ಬನ್ಸಾಲ್ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. 5,00,000/– (ರೂಪ್ಯಾ ಐದು ಲಕ್ಷ) ದೇಣಿಗೆ ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.

ಈ ಸಂದರ್ಭ ಮೊಮ್ಮಕ್ಕಳಾದ ಕಾಶ್ವಿ ಬನ್ಸಾಲ್, ಕ್ರಿಶ್ವೀ ಬನ್ಸಾಲ್, ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕರಾದ ಶ್ರೀ ಚಂದ್ರಕಾಂತ್ ಇನ್ನ, ಶ್ರೀ ಕೆ. ಪ್ರಭಾಕರ್ ರಾವ್ ಉಪಸ್ಥಿತರಿದ್ದರು.





ಕಾಪು ಶ್ರೀ ಶ್ರೀನಿವಾಸ ರಾವ್ ಮತ್ತು ಶ್ರೀಮತಿ ಪ್ರಸನ್ನ ರಾವ್ ಸ್ಮರಣಾರ್ಥ ಅವರ ಪುತ್ರ ಮುಂಬಯಿ ನಿವಾಸಿ ಶ್ರೀ ಸದಾಶಿವ ರಾವ್ ಮತ್ತು ಶ್ರೀಮತಿ ಮಮತಾ ಎಸ್. ರಾವ್ ದಂಪತಿಗಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. 5,00,000/– (ರೂಪ್ಯಾ ಐದು ಲಕ್ಷ) ದೇಣಿಗೆ ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಅವರಿಂದ ದೇಣಿಗೆ ಸ್ವೀಕರಿಸಿದರು.





ಕಮ್ಮಾಜೆ ಶ್ರೀ ವೆಂಕಪ್ಪಯ್ಯ ಮತ್ತು ಶ್ರೀಮತಿ ಪದ್ಮಾವತಿಯವರ ಸ್ಮರಣಾರ್ಥ ಅವರ ಪುತ್ರ ಬೆಂಗಳೂರು ನಿವಾಸಿ ಶ್ರೀ ಕೆ. ಯಜ್ಞ ನಾರಾಯಣ ಮತ್ತು ಶ್ರೀಮತಿ ವಸಂತಿ ಯಜ್ಞ ನಾರಾಯಣ ದಂಪತಿಗಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. 5,00,000/– (ರೂಪ್ಯಾ ಐದು ಲಕ್ಷ) ದೇಣಿಗೆ ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷ ಡಾ। ಎ. ಪಿ. ಕೃಷ್ಣ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕರಾದ ಶ್ರೀ ಸಂತೋಷ್ ಯು., ಶ್ರೀ ಕೆ. ಪ್ರಭಾಕರ್ ರಾವ್, ಶ್ರೀ ಉದಯ ಕುಮಾರ್ ಪಿ. ಮತ್ತು ಶ್ರೀ ಕುಪ್ಪು ಸ್ವಾಮಿ ಬೆಳ್ಳೆ ಇವರು ಉಪಸ್ಥಿತರಿದ್ದರು. ***ಚಿತ್ರ : ಶ್ರೀ ರಘುವೀರ್ ಪೆರ್ಡೂರ್***



ಸುರತ್ಕಲ್ ನಿವಾಸಿ ಶ್ರೀಮತಿ ಶಾರದಾ ಆನಂದ್ ತಮ್ಮ ಪತಿ ಇನ್ನಾ ಆನಂದ್ ರಾವ್ ಸ್ಮರಣಾರ್ಥ ತಮ್ಮ ಮಕ್ಕಳ ಜತೆಗೂಡಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. 2,60,000/– (ರೂಪ್ಯಾ ಎರಡು ಲಕ್ಷದ ಅರುವತ್ತು ಸಾವಿರ) ದೇಣಿಗೆ ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕ ಶ್ರೀ ಸಂತೋಷ್ ಯು. ಇವರು ಉಪಸ್ಥಿತರಿದ್ದರು. ***ಚಿತ್ರ : ಶ್ರೀ ರಘುವೀರ್ ಪೆರ್ಡೂರ್***




ಮಹಾರಾಷ್ಟ್ರ ಸತಾರದ ಕೊರೆಗಾಂವ್ ನಿವಾಸಿ ಕೆ. ಸುಬ್ರಾವ್ ಶಾನುಭಾಗ್‌ರವರ ಸ್ಮರಣಾರ್ಥ ಅವರ ಧರ್ಮಪತ್ನಿ ಶ್ರೀಮತಿ ವನಜಾಕ್ಷಿ ಶಾನುಭಾಗ್ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. 2,00,000/– (ರೂಪ್ಯಾ ಎರಡು ಲಕ್ಷ) ದೇಣಿಗೆ ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಅವರ ಮಗಳು ಶ್ರೀಮತಿ ಮಲ್ಲಿಕಾ ಅಡೂರ್, ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್ ಇವರು ಉಪಸ್ಥಿತರಿದ್ದರು. ***ಚಿತ್ರ : ಶ್ರೀ ರಘುವೀರ್ ಪೆರ್ಡೂರ್***

# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಮಂಗಳೂರು ನಿವಾಸಿ ಶಾಂಕರತತ್ವ ಅಭಿಯಾನದ ದ. ಕ. ಸಂಚಾಲಕರಾದ ಶ್ರೀ ಶ್ರೀಧರ್ ಶಾಸ್ತ್ರೀ ಮತ್ತು ಶ್ರೀಮತಿ ಶಾರದಾ ಶಾಸ್ತ್ರೀ ದಂಪತಿಗಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. 2,00,000/– (ರೂಪ್ಯಾ ಎರಡು ಲಕ್ಷ) ದೇಣಿಗೆ ನೀಡಿದ್ದಾರೆ. ಈ ಹಿಂದೆಯೂ ಅವರು ರೂ. 1,10,000/– ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು.



ಮಂಗಳೂರು ಉರ್ವ ನಿವಾಸಿ, ನಿವೃತ್ತ ಸಸ್ಯಶಾಸ್ತ್ರ ಪ್ರೊಫೆಸರ್ ಶ್ರೀಮತಿ ವಸುಂಧರಾ ಶರ್ಮರ 85ನೇ ಹುಟ್ಟುಹಬ್ಬದ ಪ್ರಯುಕ್ತ ಅವರ ಅಕ್ಕನ ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬಸ್ಥರು ರೂ. 1,81,000/– (ರೂಪ್ಯಾ ಒಂದು ಲಕ್ಷದ ಎಂಬತ್ತೊಂದು ಸಾವಿರ) ನೀಡಿ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿದ್ಯಾ ದತ್ತಿನಿಧಿ ಸ್ಥಾಪಿಸಿದ್ದಾರೆ. ಅವರಿಗೆ ಶ್ರೀ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಅವರ ಕುಟುಂಬಸ್ಥರ ಪರವಾಗಿ ಶ್ರೀ ಶಿವಪ್ರಸಾದ್ ರಾವ್, ಡಾ. ಚಂದ್ರಕಲಾ ರಾವ್, ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್ ಉಪಸ್ಥಿತರಿದ್ದರು.

**ಚಿತ್ರ : ಶ್ರೀ ರಘುವೀರ್ ಪೆರ್ಡೂರ್**



ಪಡುಮಲೆ ಸೀತಾರಾಮಯ್ಯರವರ ಸ್ಮರಣಾರ್ಥ ಅವರ ಪುತ್ರ ಮಂಗಳೂರು ನಿವಾಸಿ ಶ್ರೀ ಎಸ್. ಸೋಮಶೇಖರನ್ ಮತ್ತು ಶ್ರೀಮತಿ ಅರುಣಾ ಸೋಮಶೇಖರನ್ ದಂಪತಿಗಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. 50,000/– ದೇಣಿಗೆ ನೀಡಿದ್ದಾರೆ. ಈ ಹಿಂದೆ ಅವರು ರೂ. 1,00,000/– (ರೂಪ್ಯಾ ಒಂದು ಲಕ್ಷ) ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್ ಅವರಿಂದ ದೇಣಿಗೆ ಸ್ವೀಕರಿಸಿದರು.

***ಚಿತ್ರ : ಶ್ರೀ ರಘುವೀರ್ ಪೆರ್ಡೂರ್***

ಮಂಗಳೂರು ನಿವಾಸಿ ಶ್ರೀ ಯು. ರಾಜೇಶ್ ರಾವ್ ಮತ್ತು ಶ್ರೀಮತಿ ಸುಕನ್ಯಾ ದಂಪತಿಗಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ಮತ್ತು ವಿಶೇಷ ಚೇತನರ ವಸತಿನಿಲಯಕ್ಕೆ ರೂ. 25,000/– ದೇಣಿಗೆ ನೀಡಿದ್ದಾರೆ. ಇನ್ನು ಮುಂದೆಯೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಅನಂತಾನಂತ ಧನ್ಯವಾದಗಳು. ಈ ಸಂದರ್ಭ ಅವರ ಮಕ್ಕಳು, ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧಕ್ಷರುಗಳಾದ ಡಾ। ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ನಿರ್ದೇಶಕ ಶ್ರೀ ಯು. ಸಂತೋಷ್ ರಾವ್ ಉಪಸ್ಥಿತರಿದ್ದರು.



'ಶಿವಸದನ' ವಸತಿ ನಿಲಯವು ಸುಮಾರು ರೂ. 5 ಕೋಟಿಗಳ ಯೋಜನೆ ಆಗಿದ್ದು, ರೂ. 75,06,998/– ಸಾಲ ಬಾಕಿ ಇರುತ್ತದೆ. ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ವಸ್ತು ರೂಪದಲ್ಲೂ ದೇಣಿಗೆ ನೀಡಬಹುದು. ಹಿರಿಯ ನಾಗರಿಕರ ಸಸ್ಯಾಹಾರಿ ವಸತಿ ನಿಲಯದಲ್ಲಿ ಈಗಾಗಲೇ 40ಕ್ಕೂ ಹೆಚ್ಚು ನಿವಾಸಿಗಳಿದ್ದು, ಮಿತದರದಲ್ಲಿ ಸಸ್ಯಾಹಾರಿ ಊಟೋಪಚಾರ ಲಭ್ಯವಿರುತ್ತದೆ. ಅಪೇಕ್ಷಿತರಿಗೆ ಮಾಹಿತಿ ನೀಡಿ ಸಹಕರಿಸಿ. ಹೆಚ್ಚಿನ ಮಾಹಿತಿಗಾಗಿ

ಸಂಪರ್ಕಿಸಿ : ಶ್ರೀ ಕರುಣ್ ರಾವ್ ಬೆಳ್ಳೆ ಮೊಬೈಲ್ : 7337634359, ಶ್ರೀ ಪಿ. ಶ್ರೀಕಾಂತ್ ರಾವ್ ಮೊಬೈಲ್ : 7795116598.

ಪತ್ರಿಕೆಗೆ ಶುಭ ಬಯಸುವ–
**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**



**PRAVEEN KUMAR ADYAPADY**
**NOTARY & ADVOCATE**
**MANGALORE OFFICE**
JANVI PLAZA, IInd FLOOR
BUNTS HOSTEL, MANGALORE
**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
**We undertakes : Civil, Criminal, Motor Vehicles, A.C., D.C. Cases, Land Conversion, Registration etc.**

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**
**Dealers in : C. C. Camera, Theft Alarm, Remote Locks**
**Computers Hardware and Peripherals**
**Computer Sales & Services**



**1st Floor, Bharath Building, P. M. Rao Road, Hampankatta, Mangaluru - 575 001**

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ಧೃತಿ ಮತ್ತು ಧ್ರುವ್**

## ಬೇಟಿ ಬಚಾವೊ ಬೇಟಿ ಪಡಾವೊ – ಶ್ರೀಮತಿ ಸವಿತಾ ಎರ್ಮಾಳ್



**ಶ್ರೀಮತಿ ಸವಿತಾ ಎರ್ಮಾಳ್,** ಉಪನ್ಯಾಸಕರು, ಸರಕಾರಿ ಪದವಿಪೂರ್ವ ಕಾಲೇಜು, ಬ್ರಹ್ಮಾವರ ಇವರನ್ನು 'ಹೆಣ್ಣು ಮಕ್ಕಳನ್ನು ಉಳಿಸಿ, ಹೆಣ್ಣು ಮಕ್ಕಳನ್ನು ಓದಿಸಿ' (ಬೇಟಿ ಬಚಾವೊ ಬೇಟಿ ಪಡಾವೊ) ಮತ್ತು ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ತಂತ್ರವಿಧಾನಗಳ (ಲಿಂಗ ಆಯ್ಕೆಯ ನಿಷೇಧ) ಕಾಯ್ದೆ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮದ ರಾಯಭಾರಿಯಾಗಿ ಉಡುಪಿ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಯವರಾದ ಡಾ। ಕೆ. ವಿದ್ಯಾಕುಮಾರಿ (ಭಾ.ಆ.ಸೇ.) ಆಯ್ಕೆ ಮಾಡಿರುತ್ತಾರೆ. ಇವರು ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಬ್ರಹ್ಮಾವರ ಇದರ ಕಾರ್ಯದರ್ಶಿಯಾಗಿರುವರು ಹಾಗೂ ಶ್ರೀ ಶಾಂಕರತತ್ವ ಪ್ರಸಾರ ಸಮಿತಿ ಉಡುಪಿ ಜಿಲ್ಲೆಯ ಸಹ ಸಂಚಾಲಕರಾಗಿರುವರು. ಜತೆಗೆ ಬ್ರಹ್ಮಾವರದ ಸಮಿತಿಯ ಕಾರ್ಯದರ್ಶಿಯಾಗಿರುವರು. ಅಲ್ಲದೆ ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ ವಿಭಾಗ) ಇದರ ರಾಷ್ಟ್ರೀಯ ಸೇವಾ ಯೋಜನಾ ಕೋಶ ಬೆಂಗಳೂರು ಇದರ ಮಂಗಳೂರು ವಿಭಾಗದ ವಿಭಾಗಾಧಿಕಾರಿಯಾಗಿ ಮಾನ್ಯ ನಿರ್ದೇಶಕರು ನಿಯೋಜಿಸಿರುವರು.

## ಶ್ರೀಮತಿ ಮೀನಾಕ್ಷಿ ಅಜಿತ್ ಇವರಿಗೆ ಡಾಕ್ಟರೇಟ್ ಪದವಿ




**ಶ್ರೀಮತಿ ಮೀನಾಕ್ಷಿ ಅಜಿತ್** (ಅಸಿಸ್ಟೆಂಟ್ ಪ್ರೊಫೆಸರ್, ನಿಟ್ಟೆ ಮೀನಾಕ್ಷಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ; ನಿಟ್ಟೆ ಯೂನಿವರ್ಸಿಟಿ, ಬೆಂಗಳೂರು ಕ್ಯಾಂಪಸ್) ಅವರು B.E, M.Tech ಪದವೀಧರರಾಗಿದ್ದು, ಇದೀಗ ಪಿ.ಎಚ್.ಡಿ. (Ph.D) ಪದವಿಯನ್ನು ಪಡೆದಿರುತ್ತಾರೆ. ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿ ಬೆಳಗಾವಿಯು ಇವರ 'Deep Learning Approach to Secure Data in the Cloud Environment for DDoS Attacks' ಸಂಶೋಧನೆಗೆ ಡಾಕ್ಟರೇಟ್ ಪದವಿಯನ್ನು ನೀಡಿರುತ್ತದೆ. ಇವರು ಕಟೀಲು ಭವಾನಿಶಂಕರ್ ರಾವ್ ಮತ್ತು ಬೊಕ್ಕಸ ವಿಜಯಲಕ್ಷ್ಮಿ ಅವರ ಪುತ್ರಿಯಾಗಿದ್ದು, ದಿ। ಬೈಲಕೆರೆ ರಾಮಚಂದ್ರ ರಾವ್ ಹಾಗೂ ಕೊಡವೂರು ಅನ್ನಪೂರ್ಣ ಅವರ ಸೊಸೆ.

# ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ದಿ। ಪುರುಷೋತ್ತಮ ಸಾಂತ್ರೂರ್ಕರ್‌ರವರ ಧರ್ಮಪತ್ನಿ **ಶ್ರೀಮತಿ ಪದ್ಮಲತಾ ಸಾಂತ್ರೂರ್ಕರ್** (87) ತಾ. 5–02–2024ನೇ ಸೋಮವಾರ ಮುಂಬಯಿಯಲ್ಲಿ ನಿಧನ ಹೊಂದಿದರು. ಇವರು ಮೂವರು ಪುತ್ರರನ್ನು ಅಗಲಿದ್ದಾರೆ.

●●●



**ಶ್ರೀ ಪಿಲಿಂಜ ದಿಲೀಪ್ ಜಿ. ರಾವ್** (67) ತಾ. 8–02–2024ನೇ ಗುರುವಾರ ನಿಧನ ಹೊಂದಿದರು. ಇವರು ಪತ್ನಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.

●●●



ಪ್ರೊಫೆಸರ್ ಅನಂತ ಪದ್ಮನಾಭ ಮಾರ್ಪಳ್ಳಿ ಇವರ ಧರ್ಮಪತ್ನಿ **ಶ್ರೀಮತಿ ಸುನಂದಾ** (72) ತಾರೀಕು 9–02–2024ನೇ ಶುಕ್ರವಾರ ಬೆಂಗಳೂರಲ್ಲಿ ನಿಧನ ಹೊಂದಿದರು. ಇವರು ಪತಿ, ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ.

●●●



ನಿವೃತ್ತ ಪ್ರಾಂಶುಪಾಲರು, ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಮಾಜಿ ನಿರ್ದೇಶಕರು ಆಗಿದ್ದ **ಶ್ರೀ ಕೆ. ಎಸ್. ಪ್ರಭಾಕರ ರಾವ್** (80 ವರ್ಷ) ಇವರು ಮೈಸೂರಿನಲ್ಲಿ ದಿನಾಂಕ 15–2–2024ನೇ ಗುರುವಾರ ನಿಧನರಾದರು. ಇವರು ಪತ್ನಿ, ಪುತ್ರ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

●●●



ಕೆನರಾ ಕಾಲೇಜಿನ ಹಳೆವಿದ್ಯಾರ್ಥಿ, ಖ್ಯಾತ ಪತ್ರಕರ್ತ **ಮನೋಹರ್ ಪ್ರಸಾದ್** ತಾರೀಕು 1–3–2024ನೇ ಶುಕ್ರವಾರ ಮಂಗಳೂರಿನಲ್ಲಿ ನಿಧನ ಹೊಂದಿದರು.

ಕರಾವಳಿಗರ ಮೈಮನಗಳಲ್ಲಿ 'ಉದಯವಾಣಿ' ಎಷ್ಟು ಹಾಸುಹೊಕ್ಕಾಗಿದೆಯೋ ಮನೋಹರ ಪ್ರಸಾದ್ ಕೂಡಾ ಅಷ್ಟೇ ಚಿರಪರಿಚಿತರು. ಶುದ್ಧ, ಸರಳ ಕನ್ನಡ ಭಾಷೆ, ಸರ್ವರಿಗೂ ಅರ್ಥವಾಗುವ ರೀತಿ ಬರೆಯುತ್ತಿದ್ದ ಲೇಖನಗಳು, ವೇದಿಕೆಗಳಲ್ಲಿ ಎಲ್ಲೂ ಅಬ್ಬರಿಸದೆ ತನ್ನನ್ನು ತಾನು ವೈಭವೀಕರಿಸಿಕೊಳ್ಳದೆ ಸೊಗಸಾಗಿ ನಡೆಸಿಕೊಡುತ್ತಿದ್ದ ಕಾರ್ಯಕ್ರಮಗಳು ಹೊಸ ಪೀಳಿಗೆಯ ನಿರೂಪಕರಿಗೆ ಒಂದು ಮಾದರಿ, ಆದರ್ಶ ಎಂದರೂ ತಪ್ಪಾಗಲಾರದು. ಈ ಪ್ರತಿಭಾ ಸಂಪನ್ನನನ್ನು ಕಳೆದುಕೊಂಡು ಕರಾವಳಿಯ ಪತ್ರಿಕಾರಂಗ ಬಡವಾಗಿದೆ. ಅಗಲಿದ ಕರಾವಳಿಯ 'ಜ್ಞಾನಕೋಶ' ಮನೋಹರ ಪ್ರಸಾದ್ ಆತ್ಮಕ್ಕೆ ಹೃದಯಾಂತರಾಳದ ನಮನಗಳು.



ಕಾಳಾವರ ಶ್ರೀ ಸೀತಾರಾಮಯ್ಯರವರ ಧರ್ಮಪತ್ನಿ **ಶ್ರೀಮತಿ ರತ್ನಮ್ಮ (ನಾಗವೇಣಿ)** (87) ತಾರೀಕು 12–02–2024ನೇ ಸೋಮವಾರ ಧರ್ಮಾವರಂನಲ್ಲಿ ನಿಧನ ಹೊಂದಿದರು. ಇವರು ಪತಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

●●●



ಕಬ್ಬಿನಾಲೆ ಹೊನ್ನಕೊಪ್ಪಲ ದಿ। ಮಲ್ಲೇಶ ಹೆಬ್ಬಾರ್ ಅವರ ಧರ್ಮಪತ್ನಿ **ಮಹಾಲಕ್ಷ್ಮಿಯಮ್ಮ** (89) ತಮ್ಮ ಸ್ವಗೃಹದಲ್ಲಿ ದೈವಾಧೀನರಾದರು. ಇವರು 6 ಮಂದಿ ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



ದಿ। ಭೋಜ ರಾವ್ ಇವರ ಧರ್ಮಪತ್ನಿ **ಶ್ರೀಮತಿ ಪಡುಬಿದ್ರೆ ಗಿರಿಜಮ್ಮ** (95) ತಾರೀಕು 11–2–2024ನೇ ರವಿವಾರ ನಿಧನ ಹೊಂದಿದರು. ಅವರು ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ.

●●●



ಬೆಳ್ತಂಗಡಿಯ ಕುತ್ತ್ಯಾರು ಶ್ರೀ ಭಾಸ್ಕರ್ ರಾವ್ ಇವರ ತಾಯಿ **ಶತಾಯುಷಿ ಶ್ರೀಮತಿ ಸುಬ್ಬಮ್ಮ** (ದಿ। ಚಾರ್ಮಾಡಿ ಕಲ್ಲೊಟ್ಟು ವೆಂಕಟ್ರಮಣಯ್ಯ ಇವರ ಧರ್ಮಪತ್ನಿ) ಇವರು ತಾರೀಕು 19–02–2024ನೇ ಸೋಮವಾರ ನಿಧನರಾದರು.

●●●




ಮಂಗಳೂರು ನಿವಾಸಿ **ಶ್ರೀ ಪಿ. ಕೆ. ಕಿರಣ್ ಶಾಸ್ತ್ರೀ** (62) ತಾ. 10–03–2024ನೇ ರವಿವಾರ ನಿಧನ ಹೊಂದಿದರು. ಇವರು ತಂದೆ, ತಾಯಿ, ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

●●●



ದಿ। ನಂದಳಿಕೆ ಪ್ರಭಾಕರ್ ರಾವ್‌ರವರ ಧರ್ಮಪತ್ನಿ **ಶ್ರೀಮತಿ ಸರೋಜಿನಿ ರಾವ್** (82) ತಾರೀಕು 3–3–2024ರ ರವಿವಾರ ನಂದಳಿಕೆಯಲ್ಲಿ ನಿಧನ ಹೊಂದಿದರು.

●●●



ಪುತ್ತೂರಿನ ಬಪ್ಪಳಿಗೆ **ಶ್ರೀ ಶಿವಾನಂದ ರಾವ್** (93) ತಾರೀಕು 12–3–2024ನೇ ಮಂಗಳವಾರ ನಿಧನ ಹೊಂದಿದರು. ಇವರು ಪತ್ನಿ, ಪುತ್ರ (ಅಂಬಿಕಾ ಕಾಲೇಜಿನ ಮ್ಹಾಲಕ ಶ್ರೀ ಸುಬ್ರಹ್ಮಣ್ಯ ರಾವ್ ನಟ್ಟೋಜ) ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ.

●●●



ದಿ। ವಾಸುದೇವ ರಾವ್ ಇವರ ಧರ್ಮಪತ್ನಿ **ಶ್ರೀಮತಿ ಇಂದಿರಾ ಅಮ್ಮ** ತಾರೀಕು 4–02–2024ನೇ ರವಿವಾರ ಮೂಡುಬೆಳ್ಳೆಯಲ್ಲಿ ನಿಧನ ಹೊಂದಿದರು. ಇವರು ಓರ್ವ ಪುತ್ರಿಯನ್ನು ಅಗಲಿದ್ದಾರೆ.




ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
**ರವಿಕಿರಣ್ ಕ್ಯೊಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241



**ಕಣಿಪುರ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಪುನಃಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವದ ಸಂದರ್ಭ**ದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಕಾಸರಗೋಡಿನ ವಿದುಷಿ ರಾಧಾ ಮುರಳೀಧರ ಹಾಗೂ ಶ್ರೀಮತಿ ಶ್ವೇತಾ ನಾಗೇಶ್, ಚೆನ್ನೈ ಶಾಸ್ತ್ರೀಯ ಸಂಗೀತವನ್ನು ಪ್ರಸ್ತುತಪಡಿಸಿದರು. ಅವರೊಂದಿಗೆ ವಯಲಿನ್‌ನಲ್ಲಿ ಶ್ರೀ ಪ್ರಭಾಕರ ಕುಂಜಾರು ಮತ್ತು ಮೃದಂಗದಲ್ಲಿ ಶ್ರೀ ವಸಂತಕೃಷ್ಣ ಕಾಂಚನ ಸಹಕರಿಸಿದರು.



**ಕಣಿಪುರ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ನವೀಕರಣ ಪುನಃಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ ಮತ್ತು ವಾರ್ಷಿಕ ಜಾತ್ರೆಯ ಸಂದರ್ಭ**ದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಶ್ರೀಮತಿ ಶ್ವೇತಾ ನಾಗೇಶ್, ಚೆನ್ನೈ ಬಳಗದವರು ಕೂಚಿಪುಡಿ ನೃತ್ಯ ಕಾರ್ಯಕ್ರಮವನ್ನು ಸಾದರಪಡಿಸಿದರು.

## ಸಂಪನ್ನಗೊಂಡ ಶಿವರಾತ್ರಿ ಪೂಜೆ



ಮಾರ್ಚ್ 8ರಂದು ಉಡುಪಿ ಜಿಲ್ಲೆ ಕಾರ್ಕಳ ತಾಲೂಕಿನ ಶಂಕರ ಪ್ರತಿಷ್ಠಾನದ ವತಿಯಿಂದ ಶ್ರೀಮತಿ ಸೌಮ್ಯ ಹಾಗೂ ಶ್ರೀ ಭವಾನಿಶಂಕರ್ ರಾವ್ ಇವರ ಮನೆ 'ಧೀಮಹಿ'ಯಲ್ಲಿ ಮಹಾಶಿವರಾತ್ರಿಯ ಪೂಜೆ ಸಂಭ್ರಮದಿಂದ ನೆರವೇರಿತು.

ಆರಂಭದಲ್ಲಿ ಪುರುಷ ಭಜನಾ ತಂಡ ಹಾಗೂ ಮಹಿಳಾ ಭಜನಾ ತಂಡದವರಿಂದ ಸುಮಾರು ಒಂದು ಗಂಟೆಯ ಸಮಯ ಶಿವಭಜನಾ ಸಂಕೀರ್ತನೆ ನಡೆಯಿತು. ನಂತರ ಸಾಮೂಹಿಕವಾಗಿ ಶಿವ ಅಷ್ಟೋತ್ತರ ಶತನಾಮಾವಳಿ ಪಠಣ ನಡೆಯಿತು.

ಪಾವಂಜೆಯ ಯಾಜಿ ಶ್ರೀ ನಿರಂಜನ ಭಟ್ ಅವರ ಪೌರೋಹಿತ್ಯದಲ್ಲಿ ಶಿವರಾತ್ರಿ ಪೂಜೆ ನೆರವೇರಿತು. ಈ ಶುಭ ಸಂಜೆಯ ಸಭಾ ಕಾರ್ಯಕ್ರಮದಲ್ಲಿ ತಾಲೂಕು ಬ್ರಾಹ್ಮಣ ಸಂಘದಿಂದ ಸನ್ಮಾನಿಸಲ್ಪಡುವ ಶಂಕರ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಕೆ. ಕೇಶವ ರಾವ್ ರಾಜ್ಯಮಟ್ಟದ ತ್ರೋಬಾಲ್ ನಿರ್ಣಾಯಕ ಅಧಿಕಾರಿಯಾಗಿ ವಿದ್ಯಾ ಇಲಾಖೆಯಿಂದ ನೇಮಕಗೊಂಡ ಶಿಕ್ಷಕ ಶ್ರೀ ಕೋದಂಡರಾಮ ರಾವ್ ಹಾಗೂ ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ರಾಜ್ಯಮಟ್ಟದಲ್ಲಿ ಸಾಧಕ ಮಹಿಳೆ ಎಂದು ದಾವಣಗೆರೆಯಲ್ಲಿ ಸನ್ಮಾನಿಸಲ್ಪಡುವ ಶ್ರೀಮತಿ ಸಾವಿತ್ರಿ ಮನೋಹರ್ ರಾವ್ ಇವರನ್ನು ಪ್ರತಿಷ್ಠಾನದ ವತಿಯಿಂದ ಸನ್ಮಾನಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಕೇಶವ ರಾವ್, ಕಾರ್ಯದರ್ಶಿ ಶ್ರೀ ಸತೀಶ ರಾವ್, ಮಹಿಳಾ ವಿಭಾಗದ ಶ್ರೀಮತಿ ಐ. ಕೆ. ಪ್ರಭಾವತಿ ಮತ್ತು ಶ್ರೀಮತಿ ಶೈಲಜಾ ರತ್ನಾಕರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಯೋಜಕರಾದ ಶ್ರೀಯುತ ಭವಾನಿಶಂಕರ್ ರಾವ್ ಉಪಾಹಾರ ವ್ಯವಸ್ಥೆ ಮಾಡಿದ್ದರು. ಕಾರ್ಯದರ್ಶಿ ಸರ್ವರಿಗೂ ಧನ್ಯವಾದ ಸಲ್ಲಿಸಿದರು.

## ಬಿಂದುಮಾಧವ ಸ್ಥಾನಿಕ ಶಿವಬ್ರಾಹ್ಮಣ ಸಂಘ

### ಕಳಸ ತಾಲೂಕು, ಚಿಕ್ಕಮಗಳೂರು ಜಿಲ್ಲೆ



ನಮ್ಮ ಸಂಘದ ಸದಸ್ಯರಾದ ಕಳಸದ ಶ್ರೀ ರಾಮಚಂದ್ರ ಹೆಬ್ಬಾರ್ ಹಂದಿಗೋಡು ಇವರ ಮನೆಯಲ್ಲಿ ತಾರೀಕು 25–02–2024ರಂದು ವಿಶೇಷ ಮಾಸಿಕ ಸಭೆ ನಡೆಸಲಾಗಿತ್ತು, ಸದರಿ ಸಭೆಗೆ ಮಹಾಮಂಡಲದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಜರಿದ್ದರು, ಇವರ ಮನೆಗೆ ಹೋಗಿ ಫಲ ನೀಡಿ ಗೌರವಿಸಿದ ಕ್ಷಣ, ಇವರು ನಮ್ಮ ಸಂಘಕ್ಕೆ ಕಟ್ಟಡ ನಿರ್ಮಿಸಲು ಖಾಲಿ ನಿವೇಶನವನ್ನು ಉದಾರ ಮನಸ್ಸಿನಿಂದ ದೇಣಿಗೆ ನೀಡಲು ಒಪ್ಪಿರುತ್ತಾರೆ. ಇವರಿಗೆ ನಮ್ಮ ಹೃದಯಪೂರ್ವಕ ಅಭಿನಂದನೆಗಳು.

ಇದು ನಮ್ಮ ಒಂದು ವರ್ಷದ ಸಾಧನೆಯ ಹೊಸ ಮೈಲಿಗಲ್ಲು.

## ಶುಭವಿವಾಹ

ಕಾಸರಗೋಡು ಕೊಲ್ಲಂಗಾನ ಶ್ರೀನಿಲಯದ ಶ್ರೀಮತಿ ಶಶಿಪ್ರಭಾ ಮತ್ತು ಶ್ರೀ ಲಕ್ಷ್ಮೀಶ ಉಪಾಧ್ಯಾಯರ ಪುತ್ರ **ಚಿ| ಅನಂತ ಪ್ರಜ್ವಲ್ ಉಪಾಧ್ಯಾಯ** ಹಾಗೂ ಬೆಳ್ತಂಗಡಿ ಶ್ರೀಮತಿ ವಸಂತಿ ಮತ್ತು ದಿ| ಶಿವರಾಂ ಇವರ ಪುತ್ರಿ **ಚಿ| ಸೌ| ಶ್ವೇತಾ ರಾವ್** ಇವರ ವಿವಾಹ ತಾ. 13–3–2024ನೇ ಬುಧವಾರ ಬೆಳ್ತಂಗಡಿಯ 'ಶ್ರೀ ಧರ್ಮಸ್ಥಳ ಮಂಜುನಾಥ ಸ್ವಾಮಿ ಕಲಾಭವನ'ದಲ್ಲಿ ನಡೆಯಿತು.

❋ ❋ ❋

ಶ್ರೀಮತಿ ಜಯಂತಿ ಮತ್ತು ಶ್ರೀ ಕೃಷ್ಣರಾಜ್ ರಾವ್ ಮುನಿಯಾಲು ಇವರ ಪುತ್ರ **ಚಿ| ಪುನೀತ್** ಹಾಗೂ ಶ್ರೀಮತಿ ನೀಲಂ ಮತ್ತು ಶ್ರೀ ಜತೀಂಧರ್ ಕುಮಾರ್ ಕೌಶಲ್ ಇವರ ಪುತ್ರಿ **ಚಿ| ಸೌ| ಕಲ್ಪನಾ** ಇವರ ವಿವಾಹ ತಾ. 4–02–2024ನೇ ರವಿವಾರ ಹಿಮಾಚಲ ಪ್ರದೇಶದ 'ಸಿಲ್ವರ್‌ಓಕ್ ಪ್ಯಾಲೇಸ್'ನಲ್ಲಿ ನಡೆಯಿತು.

❋ ❋ ❋

ದಿ| ನಾಗರಾಜ್ ಬಾರ್ಕೂರು ಮತ್ತು ಶ್ರೀಮತಿ ನಾಗರತ್ನ ಇವರ ಪುತ್ರ **ಚಿ| ರಾಮಚಂದ್ರ ಬಾರ್ಕೂರು** ಹಾಗೂ ಶ್ರೀ ಡಿ. ಎಸ್. ನಟರಾಜ್ ಮತ್ತು ಶ್ರೀಮತಿ ವೀಣಾ ಇವರ ಪುತ್ರಿ **ಚಿ| ಸೌ| ಭೂಮಿಕಾ** ಇವರ ವಿವಾಹ ತಾ. 17–3–2024ನೇ ರವಿವಾರ ಬಂಗಾರುಪೇಟೆ 'ಆರ್. ಆರ್. ಕನ್ವೆನ್‌ಶನ್ ಹಾಲ್'ನಲ್ಲಿ ನಡೆಯಿತು.

❋ ❋ ❋

ಶ್ರೀ ಹರಿಹರ ರಾವ್ ಮತ್ತು ಶ್ರೀಮತಿ ಶ್ಯಾಮಲಾ ರಾವ್ ಇವರ ಸುಪುತ್ರಿ **ಚಿ| ಸೌ| ಅಪೂರ್ವ ರಾವ್** ಹಾಗೂ ಕುಬೆವೂರ್ ಶ್ರೀ ರವೀಂದ್ರ ಭಟ್ ಮತ್ತು ಶ್ರೀಮತಿ ವೀಣಾ ಭಟ್ ಇವರ ಸುಪುತ್ರ **ಚಿ| ಸನತ್ ಭಟ್** ಇವರ ವಿವಾಹ ತಾರೀಕು 3–03–2024ನೇ ರವಿವಾರ ಪುತ್ತೂರಿನ 'ಒಕ್ಕಲಿಗ ಗೌಡ ಸಮುದಾಯ ಭವನ'ದಲ್ಲಿ ನಡೆಯಿತು.

## ಉಪನಯನ

ಶ್ರೀಮತಿ ಸೌಮ್ಯ ಮತ್ತು ಶ್ರೀ ಅವಿನಾಶ್ ಚಂದ್ರ ರಾವ್ ಇವರ ಸುಪುತ್ರ **ಚಿ| ಅನಿರುದ್ಧ**ನ ಬ್ರಹ್ಮೋಪದೇಶ ತಾ. 17–01–2024ನೇ ಬುಧವಾರ ಉಡುಪಿಯ 'ಶಾರದಾ ಮಂಟಪ'ದಲ್ಲಿ ನಡೆಯಿತು.

■■■

ಶ್ರೀಮತಿ ವಿನಯ ಕುಮಾರಿ ಮತ್ತು ಶ್ರೀ ಶರತ್ ಕುಮಾರ್‌ರವರ ಸುಪುತ್ರ **ಚಿ| ಧೀರಜ್**ನ ಬ್ರಹ್ಮೋಪದೇಶ ತಾರೀಕು 21–02–2024ನೇ ಬುಧವಾರ ನಕ್ರೆ 'ಶ್ರೀ ಮಹಾಲಿಂಗೇಶ್ವರ ದೇವಸ್ಥಾನ'ದಲ್ಲಿ ನಡೆಯಿತು.

ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**

ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

Sri Hari Adyapady
Proprietor

Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**
2nd Floor, Ozanam Complex, Church Building
Main Road, BAJPE, MANGALORE



We undertake all types of Electrical, Plumbing and Sanitary works

## ಶ್ರೀರಾಮದೇವರಿಗೆ ನೀಲಾಂಜನ ಆರತಿ, ಹರಿವಾಣದ ಕೊಡುಗೆ



ಶ್ರೀ ಸುಬ್ರಹ್ಮಣ್ಯ ಸಭಾದ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಕುಮಾರ್‌ರವರು ತಾರೀಕು 16-02-2024ರಂದು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಇರುವ ಶ್ರೀ ರಾಮದೇವರಿಗೆ ಎರಡು ನೀಲಾಂಜನ ಆರತಿ, ಹರಿವಾಣ, ದೀಪದ ಎಣ್ಣೆ ನೀಡಿದರು. ಇದನ್ನು ಸಭಾದ ಉಪಾಧ್ಯಕ್ಷರು ಡಾ। ಎ. ಪಿ. ಕೃಷ್ಣ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಮತ್ತು ನಿರ್ದೇಶಕ ಶ್ರೀ ಕೆ. ಪ್ರಭಾಕರ್ ರಾವ್ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಮಹಿಳಾ ವೇದಿಕೆಯ ಶ್ರೀಮತಿ ಪಿ. ಭುವನೇಶ್ವರಿ ನಾಗರಾಜ್, ಶ್ರೀಮತಿ ಸುನೀಲ ಭುಜಂಗ ರಾವ್, ಶ್ರೀಮತಿ ಶ್ರೀಲತಾ ಗಣೇಶ್ ಉಪಸ್ಥಿತರಿದ್ದರು.

## ಅಪಾರಕೀರ್ತಿ ಗಳಿಸಿ



**ಕು। ಕೀರ್ತನಾ** ಇವರು ಚೆನ್ನೈನ ತಮಿಳುನಾಡು ಪಶು ಮತ್ತು ಪ್ರಾಣಿ ವಿಜ್ಞಾನ ವಿಶ್ವವಿದ್ಯಾಲಯ ದಿಂದ M.Vsc. ಪದವಿಯನ್ನು ಮೂರು ಚಿನ್ನದ ಪದಕದೊಂದಿಗೆ ಪಡೆದಿದ್ದಾರೆ. ಇವರು ಪುತ್ತೂರಿನ ಶ್ರೀ ಗಣೇಶ್ ಜೋಷಿ ಮತ್ತು ಶ್ರೀಮತಿ ವೀಣಾ ಇವರ ಸುಪುತ್ರಿ.

## ಪಡುಬಿದ್ರಿ ಸ್ಥಾನಿಕ ಬ್ರಾಹ್ಮಣ ಸಭಾದ ತಿಂಗಳ ಸಭೆ



ಪಡುಬಿದ್ರಿ ಸ್ಥಾನಿಕ ಬ್ರಾಹ್ಮಣ ಸಭಾದ ತಿಂಗಳ ಸಭೆಯಲ್ಲಿ ನಮ್ಮ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಉಪಾಧ್ಯಕ್ಷರಾದ ಶ್ರೀ ಪ್ರಭಾಕರ್ ರಾವ್, ಪ್ರಧಾನ ಕಾರ್ಯದರ್ಶಿ ಶ್ರೀ ಮುರಳೀಧರ್ ಶರ್ಮ ಹಾಗೂ ಕೋಶಾಧಿಕಾರಿ ಶ್ರೀ ಉದಯ ಕುಮಾರ್ ಬಾರ್ಕೂರ್, ಜೊತೆ ಕಾರ್ಯದರ್ಶಿ ಶ್ರೀ ಕೇಶವ ರಾವ್ ಹಾಗೂ ಬಂಟ್ವಾಳ ಸಂಘದ ಶ್ರೀ ಕೃಷ್ಣ ರಾವ್ ಸಂಘಗಳ ಭೇಟಿ ಕಾರ್ಯಕ್ರಮದಲ್ಲಿ ಮಹಾಮಂಡಲದಲ್ಲಿ ನಡೆಯುವ ಕಾರ್ಯಕ್ರಮಗಳ ವಿವರಣೆ ನೀಡಿದರು ಹಾಗೂ ಈ ವರ್ಷ ಮಹಾಮಂಡಲಕ್ಕೆ ಪ್ರತಿ ಸಂಘದಿಂದ ಕನಿಷ್ಠ ಎರಡು ಸದಸ್ಯರಾಗಿ ಸೇರ್ಪಡೆಗೊಳ್ಳಬೇಕು ಹಾಗೂ ಸಂಘದ ವ್ಯಾಪ್ತಿಯಲ್ಲಿರುವ ಎಲ್ಲಾ ಸದಸ್ಯರ ವಿವರಗಳನ್ನು ಕಂಪ್ಯೂಟರ್ ದಾಖಲೆ ಮಾಡುವ ಯೋಜನೆ ಇದೆ. ಮುಂತಾದ ಎಲ್ಲಾ ಕಾರ್ಯಕ್ರಮಕ್ಕೆ ತಮ್ಮ ಸಂಘದ ಸಹಕಾರ ಬೇಕು ಎಂದು ಮಹಾಮಂಡಲದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ತಿಳಿಸಿದರು. ಈ ಸಂದರ್ಭದಲ್ಲಿ ಮಹಾಮಂಡಲದ ಅಧ್ಯಕ್ಷರು ಹಾಗೂ ಎಲ್ಲಾ ಪದಾಧಿಕಾರಿಗಳನ್ನು ಸಂಘದ ವತಿಯಿಂದ ಆತಿಥ್ಯವಹಿಸಿದ ಶ್ರೀ ಜನಾರ್ದನ್ ರಾವ್ ಇವರು ಶಾಲು ಹೊದಿಸಿ, ಗೌರವಾರ್ಪಣೆ ಮಾಡಿದರು. ಪಡುಬಿದ್ರಿ ಸಂಘದ ಅಧ್ಯಕ್ಷರಾದ ಶ್ರೀ ಎಂ. ಕೆ. ಮೋಹನ್ ರಾವ್ ಸಂಘದ ವಿಚಾರಗಳನ್ನು ಮಹಾಮಂಡಲಕ್ಕೆ ತಿಳಿಸಿದರು ಮತ್ತು ಎಲ್ಲ ಸಂಘಗಳ ಸಮಸ್ಯೆಗಳನ್ನು ಆಲಿಸಿ, ಸೂಕ್ತ ಯೋಜನೆಗಳನ್ನು ರೂಪಿಸುವುದಾಗಿ ಮಹಾಮಂಡಲದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ತಿಳಿಸಿದರು. ಸಭೆಯಲ್ಲಿ ಸಂಘದ ಸಂಚಾಲಕರಾದ ಶ್ರೀ ಎಮ್. ಕೆ. ದಿವಾಕರ ರಾವ್ ಹಾಗೂ ಕೋಶಾಧಿಕಾರಿ ಶ್ರೀ ಅರವಿಂದ ರಾವ್ ಹಾಗೂ ಎಲ್ಲ ನಿರ್ದೇಶಕರು ಉಪಸ್ಥಿತರಿದ್ದರು. ಶ್ರೀ ಜನಾರ್ದನ್ ರಾವ್ ಅವರು ಸ್ವಾಗತಿಸಿದರು ಹಾಗೂ ಶ್ರೀ ಅರುಣ್ ಕುಮಾರ್ ಧನ್ಯವಾದಗೈದರು.


ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ**
**ಕದ್ರಿ, ಮಂಗಳೂರು - 575 003**

# ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

**'ಶ್ರೀ ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003**

**✆ : 9880968032 / 0824-2982095**

**ಶಾಖೆಗಳು**

| | |
|---|---|
| ಮಂಗಳೂರು | : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ ✆ : 0824 - 2491895 / 8861155454 |
| ಪುತ್ತೂರು | : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ ✆ : 08251 - 235895 / 8123659955 |
| ಬೆಳ್ತಂಗಡಿ | : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು) ✆ : 08256 - 234076 / 8867269944 |
| ಸುರತ್ಕಲ್ | : 'ಪೂವ ಆರ್ಕೇಡ್' ✆ : 0824 - 2477895 / 9611550803 |
| ಕಾರ್ಕಳ | : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್ ✆ : 08258 - 235544 / 9980528800 |
| ಸುಳ್ಯ | : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು ✆ : 08257 - 233895 / 8147539955 |
| ಬಿ.ಸಿ. ರೋಡ್ | : ಲಕ್ಷ್ಮೀ ಮಹಲ್ ✆ : 08255 - 233895 / 8792464344 |
| ವಿಟ್ಲ | : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ ✆ : 08255 - 239895 / 8147469955 |
| ಮೂಡಬಿದ್ರೆ | : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ ✆ : 08258 - 200161 / 8147549955 |
| ಪದವಿನಂಗಡಿ | : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ ✆ : 9731405917 |
| ಕುತ್ತಾರ್ | : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ ✆ : 8792034344 |
| ಕಿನ್ನಿಗೋಳಿ | : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ ✆ : 8197677575 |

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | | |
|---|---|---|
| 45 ದಿನಗಳಿಂದ 180 ದಿನಗಳ ವರೆಗೆ | - | 5% |
| 181 ದಿನಗಳಿಂದ 364 ದಿನಗಳ ವರೆಗೆ | - | 6% |
| 1 ವರ್ಷದಿಂದ 3 ವರ್ಷದ ವರೆಗೆ | - | 8% |
| 3 ವರ್ಷಕ್ಕಿಂತ ಮೇಲ್ಪಟ್ಟು | - | 9% |
| ಹಿರಿಯ ನಾಗರಿಕರಿಗೆ, ಸಂಘ-ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**ಹೂಡಿಕೆಗಳು ದ್ವಿಗುಣಗೊಳ್ಳುವ ವಿಶೇಷ ನಿರಖು ಠೇವಣಿ ಯೋಜನೆ**

**ಕನಿಷ್ಠ ಠೇವಣಿ : ರೂ. 10,000/- ಠೇವಣಿ ಅವಧಿ : 88 ತಿಂಗಳು**

**ವಿಶೇಷ ಬಡ್ಡಿದರ : 9.6%**



Prop. : SUDHAKAR BELLE
✆ : 9845193103/ 9481563103


**KARAN DIGITAL STUDIO**

Sadasukh Building, Nr. Postoffice, Padubidri - 574 111
Opp. Busstand Belman



All Marriage & Other functions
Photography & Videography Available

# ರಾಮಾ ಆಟೋಮೊಬೈಲ್ಸ್



ಮಾರುತಿ ವಾಹನ ತಜ್ಞರು



**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**

ಫೋನ್ : 0824 - 2454355, ಮೊಬೈಲ್ : 9448545702

**ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ**





ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು ಶ್ರೀ ಸುಬ್ರಹ್ಮಣ್ಯ ಸಭಾಕ್ಕೆ ತಾರೀಕು 17-02-2024ರಂದು ಚಿತ್ತೈಸಿದಾಗ ಶ್ರೀ ಸಭಾದ ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್ ತೆಗೆದ ಛಾಯಾಚಿತ್ರಗಳನ್ನು ಒಂದೇ ಚೌಕಟ್ಟಿನಲ್ಲಿ ಅಳವಡಿಸಿ ಶೃಂಗೇರಿಗೆ ತೆರಳಿ ಗುರುಗಳಿಗೆ ಅರ್ಪಿಸಿ ಗುರುಗಳ ಆಶೀರ್ವಾದ ಪಡೆಯಲಾಯಿತು. ಶ್ರೀ ಸಭಾದ ಪದಾಧಿಕಾರಿಗಳು, ನಿರ್ದೇಶಕರುಗಳು, ಸದಸ್ಯರು ಉಪಸ್ಥಿತರಿದ್ದರು. (ಚಿತ್ರ : ಶ್ರೀ ರಘುವೀರ್ ಪೆರ್ಡೂರ್)







Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* *Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*

*Editor :* *Sri M. S. Raghunath Rao, Darbe, Puttur* *Printed at :* *Rajesh Power Press, Darbe - 574 202, Puttur, D. K.*